ನೀರೊಲೆಯ ನಿಗಿ ಕೆಂಡ ಸತ್ಯವೇ
ಈ ಅಭ್ಯಂಜನವಿನ್ನು ನಿತ್ಯವೇ...!

ಈ ಮಾತು ಇನ್ನುಮುಂದೆ ನಿತ್ಯವೂ ಸತ್ಯವೂ ಆಗಬಹುದು ಎಂಬ ಮುನ್ಸೂಚನೆ ಈಗಾಗಲೇ ಸಿಗುತ್ತಿದೆ. ಒಂದು ಕಾಲದಲ್ಲಿ ಹಳ್ಳಿಗಳ ಮನೆಗಳಲ್ಲಿ ಅಡುಗೆ ಮತ್ತು ಬಚ್ಚಲು ಮನೆಗಳಲ್ಲಿ ಸದಾ ಉರಿಯುತ್ತಿರುವ ಒಲೆ, ಕರಿಗಟ್ಟಿದ ಗೋಡೆಗಳು, ಹೊಗೆ ಹೋಗಲಾಡಿಸಲು ಊದುಕೊಳವೆಯಿಂದ ಊದಿ ಬೆಂಕಿಯನ್ನು ಉರಿಸುತ್ತಿರುವ ಹೆಂಗಳೆಯರು... ಇವೆಲ್ಲ ಸಾಮಾನ್ಯ ದೃಶ್ಯಗಳಾಗಿದ್ದವು. ಆದರೆ ಮತ್ತೆ ಅಂತಹ ಸ್ಥಿತಿಗೆ ನಾವೆಲ್ಲ ಬರಬೇಕಾಗಿ ಬರಬಹುದು ಎಂಬುದನ್ನು ಜಾಗತಿಕ ವಿದ್ಯಮಾನಗಳು ಸ್ಪಷ್ಟಪಡಿಸುತ್ತಿವೆ. ಇದಕ್ಕೆ ಬಹುಮುಖ್ಯ ಕಾರಣವೇ ಹಾರ್ಮುಜ್ ಜಲಸಂಧಿ!

ಅಮೆರಿಕ, ಇರಾನ್ ನಡುವಿನ ಯುದ್ಧ ಒಮ್ಮೆ ತಾತ್ಕಾಲಿಕ ಉಪಶಮನದಂತೆ ತೋರಿದರೂ ಮತ್ತೆ ಜಿಗಿದು ನಿಲ್ಲುತ್ತಿದೆ. ಯಾವಾಗ ಹೇಗೋ ಎಂಬ ಭಯದ ಕಾರ್ಮೋಡ ಜಗತ್ತಿನೆಲ್ಲೆಡೆ ವ್ಯಾಪಿಸಿಕೊಂಡಿದೆ. ಹಾರ್ಮುಜ್ ಜಲಸಂಧಿ ಇವತ್ತು ಜಗತ್ತಿನಾದ್ಯಂತದ ಎಲ್ಲ ದೇಶಗಳ ಹೋಟೆಲ್‌ಗಳನ್ನು, ಎಲ್ಲರ ಮನೆಯ ಅಡುಗೆಯನ್ನು ನಿಯಂತ್ರಿಸುವ ಮಟ್ಟಕ್ಕೆ ಬಂದು ನಿಂತಿದೆ.

ನಿಜ, ಮಧ್ಯಪ್ರಾಚ್ಯ ದೇಶಗಳ ನಡುವಿನ ಯುದ್ಧದಿಂದಾಗಿ ನಮ್ಮ ಮನೆಯ ಅಡುಗೆ ಮನೆಯಲ್ಲಿ ಅನ್ನ ಬೇಯದಂಥ ಪರಿಸ್ಥಿತಿ ಬಂದೊದಗಿದೆ. ಈ ಎಲ್‌ಪಿಜಿ ಸಿಲಿಂಡರ್‌ನ ಕೊರತೆಯು ಮೊದಲು ತಟ್ಟಿದ್ದೇ ಆಟೊಗಳಿಗೆ ಮತ್ತು ಹೋಟೆಲ್‌ಗಳಿಗೆ. ಈಗಾಗಲೇ ಅನೇಕ ಹೋಟೆಲ್‌ಗಳು ಸೌದೆ ಒಲೆಗಳಿಗೆ ವರ್ಗಾಯಿಸಿವೆ. ಮತ್ತೆ ಕೆಲವು ಹೋಟೆಲ್‌ಗಳನ್ನು ಬಂದ್ ಮಾಡಲಾಗಿದೆ ಎಂಬ ಸುದ್ದಿ ಬರುತ್ತಿದೆ. ಆದರೆ ಸೌದೆ ಒಲೆಗಳಿಗೂ ಅದರದ್ದೇ ಆದ ಮಿತಿಗಳಿವೆ.

ಸೌದೆ ಒಲೆಗಳನ್ನು ಉಪಯೋಗಿಸಿದರೂ ಅದು ದಕ್ಷಿಣ ಭಾರತದ ಅಡುಗೆಗೆ ಬಳಸಬಹುದು. ಆದರೆ ಉತ್ತರ ಭಾರತದ ಅಡುಗೆಗೆ ಗ್ಯಾಸ್ ಸಿಲಿಂಡರೇ ಬೇಕಾಗುತ್ತದೆ. ಸೌದೆ ಒಲೆಗಳಿಂದ ಮಾಡುವ ಅಡುಗೆ ನಿಧಾನ. ದಕ್ಷಿಣ ಭಾರತದ ಅಡುಗೆಯನ್ನು ಮೊದಲೇ ಮಾಡಿಟ್ಟುಕೊಳ್ಳಬಹುದು. ಹಾಗಾಗಿಯೇ ಇವು ದಕ್ಷಿಣ ಭಾರತದ ಅಡುಗೆಗೆ ಯೋಗ್ಯ, ಉತ್ತರ ಭಾರತದ ಅಡುಗೆ ಬಿಸಿಬಿಸಿಯಾಗಿ ಆ ಕೂಡಲೇ ಕೊಡಬೇಕಾಗುತ್ತದೆ ಮತ್ತು ಬೇಗ ಮಾಡಿಕೊಡಬೇಕು. ಬೇಗ ಕೊಡಬೇಕೆಂದರೆ ಸಿಲಿಂಡರ್ ಒಂದೇ ಈಗ ಸದ್ಯಕ್ಕೆ ನಮಗಿರುವ ವಿಧಾನ ಎನ್ನುತ್ತಾರೆ ಮೈಸೂರಿನ ಹೋಟೆಲ್ ಒಂದರ ಮ್ಯಾನೇಜರ್ ಆಗಿರುವ ಲೋಕೇಶ್ ಅವರು. ಹೀಗಿದ್ದೂ ನಮಗೆ ಉತ್ತರ ಭಾರತದ ಅಡುಗೆಗಾಗಿ ಪ್ರತಿ ದಿವಸ ಎರಡು ಸಿಲಿಂಡರ್‌ಗಳು ಬೇಕೇಬೇಕು ಎಂದೂ ಹೇಳುತ್ತಾರೆ.

ಕೆಲವು ಹೋಟೆಲ್‌ಗಳಿಗೆ ದಿನನಿತ್ಯ 3–4 ಸಿಲಿಂಡರ್‌ಗಳೂ ಬೇಕಾಗುತ್ತವೆ. ಹಾಗಾಗಿ ಸಿಲಿಂಡರ್ ಕೊರತೆ ನೇರವಾಗಿ ತಟ್ಟಿದ್ದೇ ಹೋಟೆಲ್‌ಗಳಿಗೆ. ಇದರಿಂದಲೇ ಹೋಟೆಲ್‌ಗಳ ಆಹಾರದ ಬೆಲೆಯೂ ದುಪ್ಪಟ್ಟಾಗಿವೆ. ಮೊದಲು ಹೋಟೆಲ್‌ಗಳಿಗೆ ಮಾತ್ರ ತಟ್ಟಿದ ಈ ಬಿಸಿಯ ಕಾವು ನಿಧಾನಕ್ಕೆ ಸಾಮಾನ್ಯ ಜನರ ಅಡುಗೆ ಮನೆಗೂ ತಟ್ಟುತ್ತಿದೆ. ಹಳ್ಳಿ ನಗರಗಳೆನ್ನದೆ ಈಗ ಎಲ್‌ಪಿಜಿ ಸಿಲಿಂಡರ್ ಸಿಗುವುದು ನಿಧಾನವಾಗುತ್ತಿದೆ. ನಗರ ಜೀವನದಲ್ಲಂತೂ ಎಲ್‌ಪಿಜಿ ಸಿಲಿಂಡರ್ ಮೇಲೆ ಇಡೀ ಬದುಕೇ ಅವಲಂಬಿತವಾಗಿಬಿಟ್ಟಿದೆ. ಒಂದು ದಿನ ಸಿಲಿಂಡರ್ ಬರುವುದು ತಡವಾದರೂ ಬದುಕು ಕಷ್ಟ ಎಂಬ ಪರಿಸ್ಥಿತಿ ಇದೆ. ಅಂಥದ್ದರಲ್ಲಿ ಈ ಯುದ್ಧದಿಂದಾಗಿ ಈಗ ತಡವಾಗಿ ಸಿಗುವ ಎಲ್‌ಪಿಜಿ ಸಿಲಿಂಡರ್‌ಗಳು ಒಂದೊಮ್ಮೆ ಸಿಗದೇ ಹೋದರೆ...? ಭಾರತಕ್ಕೆ